(ಇ) ಈ ಯೋಜನೆಯು ಜೀವರಾಶಿ ಹಾಗೂ ಪರಿಸರ ನಾಶ ಯೋಜನೆಯಾಗಿದ್ದು ನಾಗರೀಕರಿಗೆ ಗಂಭೀರವಾದ ತೊಂದರೆ ಉಂಟು ಮಾಡುವ ಈ ಯೋಜನೆಯನ್ನು ಸರ್ಕಾರ ಕೈಬಿಡಬೇಕೆಂಬ ನಾಗರೀಕರ ಆಗ್ರಹದ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು (ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

(ಅ) ರಾಜ್ಯ ಸರ್ಕಾರದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಯಾವುದೇ ಸೂಚನೆ ನೀಡಿರುವುದಿಲ್ಲ.

(ಆ) ಅನ್ವಯಿಸುವುದಿಲ್ಲ.

(ಇ) ಪ್ರಸ್ತುತ ಸರ್ಕಾರದ ನಿಲುವಿನ ಪ್ರಶ್ನೆ ಉದ್ಭವಿಸುವುದಿಲ್ಲ.

419. ಶ್ರೀ ಗಡ್ಡ ದೇವರಮಕ್ ಗಡ್ಡಯ್ಯ ಶಿವದೂರ್ತಯ್ಯ :- ಮಾನ್ಯ ಉಪ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಶಿರಹಟ್ಟಿ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ 2005 ರಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆಯಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; ಕೆರೆ ಹೂಳೆತ್ತುವುದು ಕಾಲುವೆ ದುರಸ್ಥಿ (ವಿವರ ನೀಡುವುದು);

(ಆ) ಶಿರಹಟ್ಟಿ ಮತ ಕ್ಷೇತ್ರದ ವ್ಯಾಪ್ತಿಯ ಸಾವನೂರ ತಾಲ್ಲೂಕಿನ ಶಿದ್ದಾಪುರ ಕೆರೆ ಹೂಳೆತ್ತುವ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡಲಾಯಿತು;

(ಇ) ಶಿದ್ದಾಪುರ ಕೆರೆ ಹೂಳೆತ್ತುವ ಕಾಮಗಾರಿ ಕೆಲಸ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಬಂದಿದ್ದಲ್ಲಿ ಸ್ಥಗಿತಗೊಂಡ ಕಾಮಗಾರಿಯನ್ನು ಪುನಃ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

(ಉ) ಇಲ್ಲಿಯವರೆಗೆ ಶಿದ್ದಾಪುರ ಕೆರೆ ಹೂಳೆತ್ತುವ ಕಾಮಗಾರಿಗಾಗಿ ಎಷ್ಟು ಹಣ ವಿನಿಯೋಗಿಸಲಾಗಿದೆ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು)

(ಅ) ಶಿರಹಟ್ಟಿ ಮತಕ್ಷೇತ್ರ ವ್ಯಾಪ್ತಿಯಲ್ಲಿ 2005 ರಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆಯಿಂದ ಕೆರೆ ನಿರ್ಮಾಣ, ಕೆರೆ ಸುಧಾರಣೆ ಹಾಗೂ ಬ್ಯಾರೇಜ್ ನಿರ್ಮಾಣ, ಒಟ್ಟಾರೆ 5 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಸಲ್ಲಿಸಲಾಗಿದೆ.

(ಆ) ಅಕ್ಟೋಬರ್-2006 ರಲ್ಲಿ ಪ್ರಾರಂಭ ಮಾಡಲಾಗಿದೆ.

(ಇ) ಬಂದಿದೆ.

(ಈ) ಹೌದು.

(ಉ) ಹೂಳೆತ್ತುವ ಕಾಮಗಾರಿಗೆ ರೂ. 0.32 ಲಕ್ಷ ಕೆರೆ ಸುಧಾರಣೆಗೆ 4.04 ಲಕ್ಷ ರೂ. ಗಳನ್ನು ವಿನಿಯೋಗಿಸಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಗಡ್ಡದೇವರಮಠ ಗಡ್ಡಯ್ಯ ಶಿವಮೂರ್ತಯ್ಯ ಇವರು ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 419ಕ್ಕೆ ಉತ್ತರಾರ್ಥ

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ನೀರಾವರಿ ಕ್ಷೇತ್ರ (ಹೆಕ್ಟೇರುಗಳಲ್ಲಿ)	2006-07 ರ ವರೆಗಿನವೆಚ್ಚ	ಷರಾ
1	ಲಕ್ಷ್ಮೇಶ್ವರ ಹತ್ತಿರ ಇಂಗು ಕೆರೆ ನಿರ್ಮಾಣ	34.10	45	15.06	ಕಾಮಗಾರಿ ಪ್ರಗತಿಯಲ್ಲಿದೆ
2	ಸೂರಣಗಿ ಹತ್ತಿರ ಬ್ಯಾರೇಜ್ ನಿರ್ಮಾಣ	80.00	45	69.70	ಕಾಮಗಾರಿ ಪ್ರಗತಿಯಲ್ಲಿದೆ
3	ಮಾಗಡಿಕೆರೆ ಸುಧಾರಣೆ	29.96	30	0.40	ಹೂಳೆತ್ತುವ ಕಾಮಗಾರಿ ಪೂರ್ಣಗೊಂಡಿದ್ದು, ಏರಿಯ ದುರಸ್ತಿ ಕೆಲಸ ಪ್ರಗತಿಯಲ್ಲಿದೆ
4	ಸಿದ್ಧಾಪುರ ಕೆರೆ ಸುಧಾರಣೆ	29.99	40	4.04	ಏರಿ ಸುಧಾರಣೆ ಕೆಲಸ ಪೂರ್ಣಗೊಂಡಿದ್ದು, ಸುಮಾರು 874 ಘ.ಮೀ.ಹೂಳು ತೆಗೆಯಲಾಗಿದ್ದು, ಕಾಮಗಾರಿಯು ಸ್ಥಗಿತಗೊಂಡಿರುವುದು
5	ಮುಚ್ಚೂರ ಕೆರೆ ಸುಧಾರಣೆ	30.00	50	16.43	ಕಾಲುವೆ ಲೈನಿಂಗ್ ಕೆಲಸ ಪ್ರಗತಿಯಲ್ಲಿದೆ.
	ಒಟ್ಟು	204.05	210	105.63	

ಅಫಜಲ್ ಪುರ ನಗರದಲ್ಲಿ ಇರುವ ಇನಾಮಿ ಜಮೀನು.

658. ಶ್ರೀ ಪಾಟೀಲ್ ಎಂ.ವೈ (ಅಫಜಲ್‌ಪುರ) :– ಮಾನ್ಯ ಕಂದಾಯ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಅಫಜಲ್‌ಪುರ ನಗರದಲ್ಲಿ ಇರುವ ಇನಾಮಿ ಜಮೀನುಗಳು ಎಷ್ಟು? (ವಿವರ ಒದಗಿಸುವುದು)